## ದಿನಾಂಕ: 25.02.2020 ರಂದು ಶ್ರೀರಂಗಪಟ್ಟಣ ಉಪ-ವಿಭಾಗ ಕಛೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು

**ಹಾಜರಿದ್ದ ಅಧಿಕಾರಿ/ನೌಕರರು:**

| | | |
|---|---|---|
| 1) | ಶ್ರೀ ಶ್ರೀನಿವಾಸಮೂರ್ತಿ | : ಅಧ್ಯಕ್ಷರು, ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ವೃತ್ತ |
| 2) | ಶ್ರೀ ಸೋಮರಾಜು | : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಪಾಂಡವಪುರ ವಿಭಾಗ |
| 3) | ಶ್ರೀ ನಂದೀಶ್.ಎಂ.ಎಸ್ | : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಶ್ರೀರಂಗಪಟ್ಟಣ |
| 5) | ಶ್ರೀ ಪ್ರದೀಪ್ | : ಸಹಾಯಕ ಇಂಜಿನಿಯರ್(ವಿ), ಶ್ರೀರಂಗಪಟ್ಟಣ |
| 6) | ಶ್ರೀ ಜ್ಯೋತಿ ಎಲ್. | : ಸಹಾಯಕ ಇಂಜಿನಿಯರ್(ತಾಂ), ಶ್ರೀರಂಗಪಟ್ಟಣ |
| 7) | ಶ್ರೀ ಕೇಶವಮೂರ್ತಿ | : ಸಹಾಯಕ ಇಂಜಿನಿಯರ್(ವಿ), ಬೆಳಗೊಳ ಶಾಖೆ |
| 8) | ಶ್ರೀ ಮಂಜುನಾಥ | : ಸಹಾಯಕ ಇಂಜಿನಿಯರ್(ವಿ), ಅರಕೆರೆ ಶಾಖೆ |
| 9) | ಶ್ರೀ ಸುರೇಂದ್ರ ಮೋಹನ್ | : ಕಿರಿಯ ಇಂಜಿನಿಯರ್(ವಿ), ಕೆ.ಶೆಟ್ಟಹಳ್ಳಿ ಶಾಖೆ |
| 10) | ಶ್ರೀ ಕೆ.ಆರ್. ರಾಜು | : ಕಿರಿಯ ಇಂಜಿನಿಯರ್(ವಿ), ಕೊಡಿಯಾಲ ಶಾಖೆ |
| 11) | ಶ್ರೀ ನವೀನ್‌ಕುಮಾರ್ | : ಕಿರಿಯ ಇಂಜಿನಿಯರ್(ವಿ), ನಗುವನಹಳ್ಳಿ ಶಾಖೆ |
| 12) | ಶ್ರೀ ಕುಮಾರ್ | : ಪ್ರಭಾರ ಹಿರಿಯ ಸಹಾಯಕ, ಪಟ್ಟಣ ವಿಭಾಗ |

ಜನಸಂಪರ್ಕ ಸಭೆಯ ಅಧ್ಯಕ್ಷರು ಬೆಳಗ್ಗೆ 11.30ರಲ್ಲಿ ಸಭೆಯನ್ನು ಪ್ರಾರಂಭಿಸಿ, ಸ್ವಾಗತ ಭಾಷಣವನ್ನು ಮಾಡುವ ಮೂಲಕ ಸಭೆಗೆ ಹಾಜರಾಗಿದ್ದ ಅಧಿಕಾರಿ/ನೌಕರ ವರ್ಗದವರಿಗೆ, ಹಾಗೂ ಗ್ರಾಹಕರಿಗೆ ಸ್ವಾಗತ ಕೋರುತ್ತಾ, ಶ್ರೀರಂಗಪಟ್ಟಣ ತಾಲ್ಲೋಕು ವ್ಯಾಪ್ತಿಯಲ್ಲಿ ವಿದ್ಯುಚ್ಛಕ್ತಿಗೆ ಸಂಬಂಧಿಸಿದ ದೂರು ಮತ್ತು ಸಲಹೆಗಳನ್ನು ಮುಕ್ತವಾಗಿ ಚರ್ಚಿಸಲು ಕೋರಿದರು. ನಂತರ ಸಭೆಯಲ್ಲಿ ನೊಂದಾಯಿಸಲ್ಪಟ್ಟ ದೂರು ಮತ್ತು ದೂರಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

| | ದೂರು | ಕ್ರಮ |
|---|---|---|
| 1) | **ಶ್ರೀ ಎಮ್.ಸಿ.ಚಂದ್ರೇಗೌಡ, ಎಂ.ಶೆಟ್ಟಹಳ್ಳಿ ಮೊಬೈಲ್ ಸಂಖ್ಯೆ: 9902830191** | |
| | ಆಕ್ರಮ-ಸಕ್ರಮ ಯೋಜನೆಯಡಿಯಲ್ಲಿ ಸಂಪರ್ಕ ಪಡೆದಿದ್ದು, ಇದುವರೆವಿಗೂ ಮೂಲ ಭೂತ ಸೌಕರ್ಯ ನೀಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. | ಮಾನ್ಯ ಅ.ಇಂ(ವಿ) ಮಂಡ್ಯ ವೃತ್ತರವರು ಕೂಡಲೇ URIP ಯೋಜನೆಯಡಿಯಲ್ಲಿ ಅಂದಾಜು ಪಟ್ಟಿ ತಯಾರಿಸಿ ವಿಭಾಗಿಯ ಕಛೇರಿಗೆ ಸಲ್ಲಿಸಿ, 15 ದಿನದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಸೂಚಿಸಿರುತ್ತಾರೆ. |
| 2) | **ಶ್ರೀ ಅಪ್ಪಾಜಿಗೌಡ, ಕೆ.ಶೆಟ್ಟಹಳ್ಳಿ ಮೊಬೈಲ್ ಸಂಖ್ಯೆ: 9448878066** | |
| | ಪಂಚಾಯತಿ ಕಛೇರಿಯ ರಸ್ತೆಯಲ್ಲಿ ಹೊಸದಾಗಿ ಬಡಾವಣೆ ನಿರ್ಮಿಸಿದ್ದು, ಬೀದಿ ದೀಪಕ್ಕೆ ಕಂಬಗಳನ್ನು ಅಳವಡಿಸಿಕೊಡಬೇಕೆಂದು ಕೋರಿರುತ್ತಾರೆ | ಮಾನ್ಯ ಅ.ಇಂ(ವಿ) ಮಂಡ್ಯ ವೃತ್ತರವರು ಗ್ರಾಹಕರಿಗೆ ತಿಳಿಸುತ್ತಾ ಗ್ರಾಮ ಪಂಚಾಯತಿ ವಾರು ಕುಡಿಯುವ ನೀರು ಮತ್ತು ಬೀದಿ ದೀಪಗಳ ಎಸ್ಕಾಂ ಮೊತ್ತವನ್ನು ಸಂಪೂರ್ಣ ಭಾಕಿ ಉಳಿಸಿಕೊಳ್ಳದೇ ಪಾವತಿಸಬೇಕು ಮತ್ತು ಸಂಬಂಧಿಸಿದ ಗ್ರಾಮ ಪಂಚಾಯತಿ Resolution ಮಾಡಿ ಮನವಿ ಪತ್ರದೊಂದಿಗೆ ಸಲ್ಲಿಸಿದಲ್ಲಿ ಕ್ರಮಕ್ಕೆಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ. |
| 3) | **ಶ್ರೀ ರವೀಶ್, ಕಡತನಾಳು ಮೊಬೈಲ್ ಸಂಖ್ಯೆ: 984445766** | |
| | ಶ್ರೀ ರವೀಶ್ ರವರು ಅಚ್ಚಪ್ಪನಕೊಪ್ಪಲಿನಲ್ಲಿ ಕೋಳಿ ಫಾರಂ ನಡೆಸುತ್ತಿದ್ದು, ನಮಗೆ ಈ ಹಿಂದೆ ಜನರಲ್ ಲೈಸೆನ್ಸ್ ಪತ್ರ ಸಿಗದ ಕಾರಣ ಎಲ್.ಟಿ-7 ಜಕಾತಿಯಲ್ಲಿ ಸಂಪರ್ಕ ಕಲ್ಪಿಸಿದ್ದು, ಈಗಾ ಜನರಲ್ ಲೈಸೆನ್ಸ್ ಸಿಗುತ್ತಿರುವ ಕಾರಣ ನಮಗೆ ಶಾಶ್ವತ ವಿದ್ಯುತ್ ಸಂಪರ್ಕ ನೀಡಬೇಕೆಂದು ಕೋರಿರುತ್ತಾರೆ. | ಮಾನ್ಯ ಅ.ಇಂ(ವಿ) ಮಂಡ್ಯ ವೃತ್ತರವರು ಜನರಲ್ ಲೈಸೆನ್ಸ್ ಪಡೆದು ಈ ಕಛೇರಿಗೆ ಸಲ್ಲಿಸಿದಲ್ಲಿ ನಿಯಾಮಾನುಸಾರ ಶಾಶ್ವತ ವಿದ್ಯುತ್ ಸಂಪರ್ಕ ನೀಡುವುದಾಗಿ ತಿಳಿಸಿರುತ್ತಾರೆ |
| 4) | **ಶ್ರೀ ಸೋಮಶೇಖರ್, ಆರಕೆರೆ ಮೊಬೈಲ್ ಸಂಖ್ಯೆ: 9141484948** | |
| | 1) ಮಂಜುನಾಥ ಟಿ.ಸಿ, ಆರಕೆರೆ ಗ್ರಾಮದಲ್ಲಿನ ಪರಿವರ್ತಕವು ಅಧಿಕ ಹೊರೆಹೊಂದಿದ್ದು, ರಾತ್ರಿಯವೇಳೆಯಲ್ಲಿ ಸಿಂಗಲ್ ಫೇಸ್ ಆಗುತ್ತಿದ್ದು ಗ್ರಾಹಕರಿಗೆ ವಿದ್ಯುತ್ ಸಮಸ್ಯೆಯಾಗುತ್ತಿರುವುದಾಗಿ ತಿಳಿಸಿರುತ್ತಾರೆ.<br>2) ಜನಸಂಪರ್ಕ ಸಭೆಯ & ಗ್ರಾಹಕರ ಸಭೆ ಮಾಹಿತಿಯು ಸರಿಯಾಗಿ ಜನರಿಗೆ ತಲುಪುತ್ತಿಲ್ಲ ಎಂದು ತಿಳಿಸಿರುತ್ತಾರೆ. | ಮಾನ್ಯ ಅ.ಇಂ(ವಿ) ಮಂಡ್ಯ ವೃತ್ತರವರು ಈಗಾಗಲೇ ಕಾಮಗಾರಿ ಕೈಗೆತ್ತಿಕೊಂಡಿದ್ದು, ಮುಂದಿನ ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿರುತ್ತಾರೆ<br>2) ಜನಸಂಪರ್ಕ ಸಭೆಯ ಮಾಹಿತಿಯನ್ನು ಈಗಾಗಲೇ ಮೂರು ದಿನ ಮುಂಚಿತವಾಗಿಯೇ ಪತ್ರಿಕಾ ಪ್ರಕಟಣೆ ನೀಡುತ್ತಿದ್ದು, ಎಲ್ಲಾ ಪತ್ರಿಕೆಯಲ್ಲಯೂ ಮಾಹಿತಿ ಲಭ್ಯವಿರುತ್ತದೆ.<br>3) ಗ್ರಾಹಕರ ಸಭೆಯನ್ನಯ ಪ್ರತಿ ತಿಂಗಳ ಮೂರನೇ ಶನಿವಾರದಂದು ನಡೆಸಲಾಗುತ್ತಿರುತ್ತದೆ. |

| | |
|---|---|
| **ಶ್ರೀ ಮಹೇಶ್, ಬಳ್ಳೆಕೆರೆ ಮೊಬೈಲ್ ಸಂಖ್ಯೆ: 9620509664** ಕೋಳಿ ಫಾರಂಗೆ ನಿರಂತರ ವಿದ್ಯುತ್ ಸಂಪರ್ಕ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. | ಮಾನ್ಯ ಅ.ಇಂ(ವಿ) ಮಂಡ್ಯ ವೃತ್ತರವರು ಗ್ರಾಮ ಠಾಣ ಪರಿಮಿತಿ ಹೊರ ಹೋಗುವ ಪ್ರದೇಶಕ್ಕೆ ಇಲಾಖೆಯಿಂದ ಮುಲಭೂತ ಸೌಕರ್ಯ ನೀಡುವ ಅವಕಾಶವಿರುವುದಿಲ್ಲ ಎಂದು ತಿಳಿಸುತ್ತಾ ಗ್ರಾಹಕರೇ ಇಚ್ಚಿಸಿದಲ್ಲಿ ಸ್ವಯಂ ಕಾರ್ಯ ನಿರ್ವಾಹಣ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ಮಾಡಿಕೊಳ್ಳ ಬೇಕೆಂದು ತಿಳಿಸಲಾಗಿದೆ. |

ಸಭೆಯನ್ನು 1:00ಕ್ಕೆ ಮುಕ್ತಾಯಗೊಳಿಸುತ್ತಾ, ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಉಪ-ವಿಭಾಗಾಧಿಕಾರಿಯವರಿಗೆ ಸೂಚಿಸಲಾಯಿತು.

ಮೆಮೊ ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಶ್ರೀರಂಪ/2019-20/ 4171-75 ದಿನಾಂಕ: 03/03/2020

**ಪ್ರತಿಗಳನ್ನು ಇವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.**

1) ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಲಯ, ಚಾವಿಸನಿನಿ, ಮೈಸೂರು.
2) ಪ್ರಧಾನ ವ್ಯವಸ್ಥಾಪಕರು(ತಾಂ), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು.
3) ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ನಿಗಮ ಕಾರ್ಯಾಲಯ, ಚಾವಿಸನಿನಿ, ಮಂಡ್ಯ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ, ಪಾಂಡವಪುರ.
4) ಕಚೇರಿ ಪ್ರತಿ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಚಾವಿಸನಿನಿ, ಶ್ರೀರಂಗಪಟ್ಟಣ.